ಸಿ.ಸಿ .ನಂ.154/2023 ಪಿಡಬ್ಲೂಃ 1

ದಿನಾಂಕಃ 22-10-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

4. ಈ ಕೇಸಿನಲ್ಲಿ ಆರೋಪಿಗೆ ಯಾವುದೇ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ . ನಾರ್ಮಲ್ ನೋಟಿಸು ಮೂರು ಬಾರಿ ಕೊಟ್ಟಿದ್ದೇವೆ . ರಜಿಸ್ಟರ್ ನೋಟಿಸು ಮೂರು ಬಾರಿ ಕೊಟ್ಟಿದ್ದೇವೆ . ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ವಕೀಲರ ಮೂಲಕ ಕೂಡ ನೋಟಿಸನ್ನು ಕೊಟ್ಟಿದ್ದೇವೆ . ಚೆಕ್ ದಿಃ 05-01-2022 ರಂದು ನಗದೀಕರಣವಾಗದೇ ವಾಪಸ್ಸು ಬಂದಿರುತ್ತದೆ. ಅದರ ನಂತರ ಆರೋಪಿಗೆ ನೋಟಿಸನ್ನು ಕೊಟ್ಟಿರುತ್ತೇವೆ . ದಿನಾಂಕ ನೆನಪಿಲ್ಲ. ಸದರಿ ನೋಟಿಸು ಆರೋಪಿಗೆ ತಲುಪಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ . ನೋಟಿಸನ್ನು ನೀಡಿದ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆರೋಪಿಗೆ ನೋಟಿಸನ್ನು ನೀಡಿದ್ದರೆ ಸದರಿ ದಾಖಲಾತಿ ಯಾವಾಗ ತಲುಪಿದೆ ಎಂದು ಗೊತ್ತಾಗುತ್ತದೆ. ಆ ದಾಖಲಾತಿ ನಾನು ನೋಡಿಲ್ಲ. ಈ ಕೇಸಿನಲ್ಲಿ ಹಾಜರು ಪಡಿಸಿದ ಎಲ್ಲಾ ದಾಖಲಾತಿಗಳು ನಮ್ಮ ಕಸ್ಟಡಿಯಲ್ಲಿರುವಂತಹ ದಾಖಲಾತಿ ಎಂದರೆ ಸರಿ . ಸದರಿ ದಾಖಲಾತಿಗಳು ಯಾರ ಯಾರ ಕೈಯಲ್ಲಿ ಸಿಗುವಂತಹ ದಾಖಲಾತಿಗಳಲ್ಲ . ನಮ್ಮ ಸಿಬ್ಬಂದಿಗಳ ಕೈಯಲ್ಲೇ ಇರುವಂತಹ ದಾಖಲಾತಿಗಳು ಎಂದರೆ ಸರಿ . ಫಿರ್ಯಾದು ತಯಾರಿಸುವಾಗ ನಮ್ಮ ವಕಿಲರಿಗೆ ನೋಟಿಸನ್ನು ನೀಡಿದ ದಿನಾಂಕ ಹಾಗೂ ನೋಟಿಸು ಜಾರಿಯಾದ ದಿನಾಂಕ ಹೇಳಿರುತ್ತೇನೆ . ನಾನು ಹೇಳಿದ ಆಧಾರದ ಮೇಲೆ ಅವರು ದಿನಾಂಕಗಳನ್ನು ನಮೂದಿಸಿದ್ದಾರೆ ಎಂದರೆ ಸರಿ. ಅಂಚೆ ರಸೀದಿ ಹಾಗೂ ಅಂಚೆ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ . ಆದರೆ ನಾನು ಸರಿಯಾಗಿ ನೋಡಿಲ್ಲ . ನಾವು ನೋಟಿಸನ್ನು ಕಳುಹಿಸಿದ್ದೇವೆ ಹಾಗೂ ನೋಟಿಸು ತಲುಪಿದೆ ಎಂದು ಹೇಳಿರುವ ದಿನಾಂಕಗಳನ್ನು ನಾನು ದಾಖಲಾತಿಗಳನ್ನು ನೋಡಿ ಹೇಳಿರುತ್ತೇನೆ. ನಾನು ಹಾಜರು ಪಡಿಸಿದ ಅಂಚೆ ರಸೀದಿ ದಿಃ 19-01-

2022 ರಂದು ಕಳುಹಿಸಿರುತ್ತೇವೆ . ಅಂಚೆ ಸ್ವೀಕೃತಿ ಪತ್ರ ದಿಃ 25-01 ಕ್ಕೆ ತಲುಪಿದೆ . ಅಂಚೆ ಇಲಾಖೆಯವರು ಇಸ್ವಿ ಹಾಕಿಲ್ಲ. ಅಂಚೆ ಸ್ವೀಕೃತಿಯಲ್ಲಿ ಕೈಯಲ್ಲಿ ಬರೆದಿರುವ ಆಧಾರದ ಮೇಲೆ 25-01 ಎಂದು ಹೇಳುತ್ತಿದ್ದೇನೆ ಎಂದರೆ ಸರಿ . ಅಂಚೆ ಸ್ವೀಕೃತಿಯಲ್ಲಿರುವ ಆರೋಪಿಯ ಹೆಸರು ಮತ್ತು 25-01 ಎಂದು ಬರೆದಿರುವುದು ಒಂದೇ ಇಂಕಿನಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿ ಕಪ್ಪು ಶಾಯಿಯಲ್ಲಿದೆ ಎಂದು ನುಡಿದಿರುತ್ತಾರೆ. ಅಂಚೆ ಸ್ವೀಕೃತಿಯಲ್ಲಿ ಬರವಣಿಗೆ ಹಾಗೂ 25-01 ಎಂದು ಬರೆದಿರುವುದು ಒಂದೇ ಇಂಕಿನಲ್ಲಿದೆ ಹಾಗೂ ಸಹಿ ಬೇರೆ ಇಂಕಿನಲ್ಲಿದೆ ಎಂದರೆ ಸಾಕ್ಷಿ ಸಹಿ ಹಾಗೂ ಬರವಣಿಗೆ ವ್ಯತ್ಯಾಸ ಇದೆ ಎಂದು ನುಡಿದಿರುತ್ತಾರೆ . ಅಂಚೆ ಸ್ವೀಕೃತಿಯಲ್ಲಿ ದಿನಾಂಕ ಹೊಂದಿರುವ ಅಂಚೆ ಸೀಲು ಇರುತ್ತದೆ ಎಂದರೆ ಸರಿ . ನಾವು ಕಳುಹಿಸಿದ ಎಂದು ಹೇಳುವ ಅಂಚೆ ಸ್ವೀಕೃತಿಯಲ್ಲಿ ದಿಃ 19-01-2022 ಎಂಬ ಸೀಲು ಇದೆ ಎಂದರೆ ಸರಿ. ಯಾವುದೇ ಅಂಚೆಯ ಮೇಲೆ ಇಲ್ಲಿಂದ ಹೋದ ದಿನಾಂಕದ ಒಂದು ಸೀಲು ಅಂಚೆ ತಲುಪಿದ ಎರಡನೇ ಸೀಲು ಹಾಗೂ ಪುನಃ ವಾಪಸ್ಸು ಬಂದಿರುವ ಮೂರನೇ ಸೀಲು ಒಟ್ಟೂ ಮೂರು ಸೀಲುಗಳು ಇರುತ್ತವೆ ಎಂದರೆ ಸರಿ. ಇಲ್ಲಿಂದ ಕಳುಹಿಸುವಾಗ ಹಾಗೂ ಮತ್ತೇ ಅದೇ ಆಫೀಸಿಗೆ ಬಂದಾಗ ಟು ಎಂದು ಇರುವ ಪುಟದಲ್ಲಿ ಸೀಲ್ ನ್ನು ಹಾಕುತ್ತಾರೆ . ತಲುಪಿದ ದಿನಾಂಕದಂದು ಅವರ ಹೆಸರಿರುವ ಪುಟದಲ್ಲಿ ಸೀಲ್‌ನ್ನು ಹಾಕುತ್ತಾರೆ ಎಂದರೆ ಗೊತ್ತಿಲ್ಲ . ತಲುಪಿದೆ ಎಂದು ಹೇಳುವ ಪುಟದಲ್ಲಿ ದಿನಾಂಕ 21-01-2022 ಎಂದು ನಮೂದಿದೆ ಎಂದರೆ ಸರಿ. ರಿಟರ್ನ ಅವರ ಆಫೀಸಿಗೆ ಬಂದಿದೆ ಎಂದು ಹೇಳುವ ಪುಟದಲ್ಲಿ ದಿಃ 22-01-2022 ಎಂದು ನಮೂದಿದೆ ಎಂದರೆ ಸರಿ . ಈ ಸೀಲು ಯಾವತ್ತೂ ಅವರಿಗೆ ನೋಟಿಸು ತಲುಪಿದೆ ಎಂಬ ಬಗ್ಗೆ ನಿಖರವಾದ ದಿನಾಂಕ ಎಂದರೆ ಸರಿ. ಈ ದಿನಾಂಕವನ್ನು ನಮೂದಿಸಿ ಪ್ರಕರಣವನ್ನು ದಾಖಲಿಸಿದ್ದರೆ ಇದು ಅವಧಿ ಮೀರಿದ ಪ್ರಕರಣವಾಗುತ್ತಿತ್ತು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ . ಇದು ಅವಧಿ ಮೀರಿದ ಪ್ರಕರಣವಾದ್ದರಿಂದ ನಾವೇ ಕೈಯಲ್ಲಿ 25-01 ಎಂದು ಬರೆದಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ನಾವು ಬರೆದಿದ್ದರೆ ಇಸ್ವಿಯನ್ನು ಕೂಡ ಹಾಕುತ್ತಿದ್ದೆವು ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಅಂಚೆ ರಸೀದಿ ಅಂಚೆ ಸ್ವೀಕೃತಿಗೆ ಸಂಬಂಧಪಟ್ಟಿದೆ ಎಂದು ಕೇಳಲಾಗಿ ನಾವು 2-3 ನೋಟಿಸುಗಳನ್ನು ಕಳುಹಿಸಿದ್ದೇವೆ ಕಾರಣ

ಪಿಡಬ್ಲೂಃ 1

ಅದೇ ರಸೀದಿ ಎಂದು ಹೇಳಲು ಆಗುವುದಿಲ್ಲ. ರಸೀದಿ ಯಾವುದು ಎಂದು ಗೊತ್ತಾದರೆ ದಾಖಲೆ ಹಾಜರು ಪಡಿಸಬಹುದು. ಸಾಕ್ಷಿಗೆ ಅಂಚೆ ಕಚೇರಿಯವರು ನೀಡಿದ ಪತ್ರವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಈ ದಾಖಲಾತಿ ಪ್ರಕಾರ ದಿಃ 20-01-2022 ಕ್ಕೆ ನಾವು ಕಳಿಸಿದ ಹೆಸರಿನ ವ್ಯಕ್ತಿಗೆ ನೋಟಿಸು ಜಾರಿಯಾಗಿದ್ದು ತೋರಿಸುತ್ತಿದೆ ಎಂದರೆ ಸಾಕ್ಷಿ ಸದರಿ ದಾಖಲಾತಿ ಮಾಹಿತಿಯ ಪ್ರಕಾರ ಸರ್ವ ಆಗಿದೆ ಎಂದು ತೋರಿಸುತ್ತಿದೆ ಎಂದು ನುಡಿದಿರುತ್ತಾರೆ . ದಿಃ 20-01-2022 ನ್ನು ತೋರಿಸಿದರೆ ನಮ್ಮ ಪ್ರಕರಣ ಅವಧಿ ಮೀರಿದ ಪ್ರಕರಣ ಆಗುತ್ತಿತ್ತು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ . ಅವಧಿ ಮೀರಿದ ಪ್ರಕರಣ ದಾಖಲು ಮಾಡಲು ಸಬಲ ಕಾರವಿಲ್ಲದೇ ನಾವೇ ದಾಖಲಾತಿಯಲ್ಲಿ ದಿಃ 25-01 ಎಂದು ಬರೆದಿದ್ದೇವೆ ಎಂದರೆ ಸರಿಯಲ್ಲ . ಕಾನೂನು ಬಾಹಿರವಾಗಿ ದಾಖಲಾತಿಯನ್ನು ತಿದ್ದಿ ಆರೋಪಿಗಲ್ಲದೇ ನ್ಯಾಯಾಲಯಕ್ಕೂ ಕೂಡ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ . ನಮ್ಮ ಬಳಿ ಇರುವ ದಾಖಲಾತಿಗಳನ್ನು ಮುಂದಿನ ದಿನಾಂಕದಂದು ಹಾಜರು ಪಡಿಸಲು ತೊಂದರೆ ಇಲ್ಲ.

(ಈ ಹಂತದಲ್ಲಿ ದಾಖಲಾತಿಗಳ ಹಾಜರಾತಿಗಾಗಿ ಪ್ರಕರಣ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.